ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಮಾಗಡಿ ರಸ್ತೆ ಪೋಲೀಸ್ ಕ್ವಾರ್ಟರ್ಸ್‌ಗೆ ಈ ವರ್ಷ ಸುಮಾರು ಒಂದು ಲಕ್ಷದ 61 ಸಾವಿರ ರೂಪಾಯಿಗಳನ್ನು ಇಟ್ಟಿದ್ದೇವೆ. ಜಾರ್‌ಕ್‌ಬಂಡೆ ಕಾವಲ್ ಪೊಲೀಸ್ ಕ್ವಾರ್ಟರ್ಸ್‌ಗೆ 1.3 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ನಮಗೆ ಎಷ್ಟು ಅನುದಾನ ಬರುತ್ತದೆ ಅದರ ಮೇಲೆ ಕಟ್ಟಡಗಳ ರಿಪೇರಿಗೆ ಹಣ ಇಡುತ್ತೇವೆ. ನಾವು 70 ರೂಪಾಯಿಗಳನ್ನು ಮೆಯಿಂಟೆನೆನ್ಸ್‌ಗೆ ಎಂದು ಕೇಳಿದ್ದರೆ 40ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಎಷ್ಟು ಪ್ರಮಾಣದಲ್ಲಿ ಹಣ ಬರುತ್ತದೆ ಅದನ್ನು ಅನುಸರಿಸಿ ಈ ಕ್ವಾರ್ಟರ್ಸ್ ರಿಪೇರಿ ಮಾಡಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಲಕ್ಕಣ್ಣ : ಹಿಂದೆ ಕಟ್ಟಡದ ವೆಚ್ಚದ ಪ್ರಕಾರ ಇಂತಿಷ್ಟು ಭಾಗ ಎಂದು ಕೊಡುತ್ತಿದ್ದರು ಅದು ಈಗಿನ ಬೆಲೆಯಲ್ಲಿ ಅದು ಏನೇನು ಸಾಕಾಗುವುದಿಲ್ಲ ಇದರಿಂದ ಆ ಕ್ವಾರ್ಟರ್ಸ್ ಕೊಳಚೆ ಪ್ರದೇಶಗಳಂತೆ ಕಾಣುತ್ತಿವೆ. ನಿಮಗೆ ರಿಪೇರಿ ಮಾಡಿಸಲು ಸಾಧ್ಯವಿಲ್ಲವೆಂದರೆ ಅವರಿಗೆ ಸ್ವಂತಕ್ಕೆ ಕೊಟ್ಟು ಹಣ ವಸೂಲ್ಮಾಡಿದರೆ ಅವರೇ ಸ್ವತ ರಿಪೇರಿ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಇದು ಸಾಧ್ಯವೆ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಆ ನೀತಿ ಬಗ್ಗೆ ಸರ್ಕಾರದಲ್ಲಿ ಚರ್ಚೆ ಮಾಡಿ ತೀರ್ಮಾನ ಮಾಡಬೇಕಾಗುತ್ತದೆ. ಆದರೆ ಈ ವರ್ಷ ಹೆಚ್ಚಿನ ಅನುದಾನ ಕೊಡಬೇಕು, ರಿಪೇರಿ ಮಾಡಿಸಬೇಕೆಂಬ ಉದ್ದೇಶ ಸರ್ಕಾಕ್ಕಿದೆ. ಆ ಪ್ರಕಾರ ಈ ವರ್ಷ ಒಂದು ಲಕ್ಷದ ೬೦ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಮುಂದಿನ ವರ್ಷ ಅದಕ್ಕೆ ಹೆಚ್ಚಿನ ಅನುದಾನ ನೀಡುವ ಪ್ರಯತ್ನ ಮಾಡಲಾಗುವುದು. ೭೦ ಕೋಟಿ ಕೇಳಿದ್ದರಲ್ಲಿ ಕೇವಲ ೪೦ ಕೋಟಿ ರೂಪಾಯಿಗಳನ್ನು ಮಾತ್ರ ಬಿಲ್ಡಿಂಗ್ ಮೆಯಿಂಟೆನೆನ್ಸ್‌ಗೆಂದು ಕೊಟ್ಟಿದ್ದಾರೆ. ಇದರಿಂದ ತೊಂದರೆಯಾಗಿದೆ ಅದಷ್ಟು ಜಾಗ್ರತೆ ಕ್ವಾರ್ಟರ್ಸ್ ರಿಪೇರಿಗೋಸ್ಕರ ಏನು ಮಾಡಬೇಕು ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅವರಿಗೇ ಸ್ವಂತಕ್ಕೆ ಕೊಡುವುದಕ್ಕೆ ಆಗುವುದಿಲ್ಲ, ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಹಿರೇಕೆರೂರುನಲ್ಲಿ ನ್ಯಾಯಾಲಯ ಕಟ್ಟಡದ ನಿರ್ಮಾಣ ಸ್ಥಗಿತಗೊಂಡಿರುವುದು

1877 - ಬಿ.ಹೆಚ್. ಬನ್ನಿಕೊಡು (ಹಿರೆಕೇರೂರು) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಮುನಿಸೀಫ್ ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಕಟ್ಟಡದ ನಿರ್ಮಾಣ ಕೆಲಸದ ಗುತ್ತಿಗೆದಾರ ಬಿಟ್ಟು ಹೋಗಿರುವುದರಿಂದ ಕಟ್ಟಡದ ಕೆಲಸ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಸದರಿ ಕಟ್ಟಡವನ್ನು ತೀವ್ರಗತಿಯಲ್ಲಿ ಪ್ರಾರಂಭಿಸಿ ಪೂರ್ಣಗೊಳಿಸಲು ಹೊಸದಾಗಿ ಗುತ್ತಿಗೆದಾರರನ್ನು ನೇಮಿಲಸಲು ಕ್ರಮ ಕೈಗೊಳ್ಳಲಾಗಿದೆಯೇ

ಇ) ಗುತ್ತಿಗೆದಾರರು ಬಾಲರದೇ ಇದ್ದಲ್ಲಿ ಇಲಾಖೆಯವರೇ ಅಪೂರ್ಣವಾಗಿರುವ ಕಟ್ಟಡದ ಕೆಲಸವನ್ನು ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಈ) ಸದರಿ ಕಟ್ಟಡವನ್ನು ಪೂರ್ಣಗೊಳಿಸಲು ಬೇಕಾಗಿರುವ ಅವಧಿಯೆಷ್ಟು

ಶ್ರೀ ಬಿ.ಹೆಚ್. ಅಶ್ವಥರೆಡ್ಡಿ (ಲೋಕೋಪಯೋಗಿ ಮಂತ್ರಿಗಳು)

ಅ) ಹೌದು.

ಆ) ಹೌದು ವಹಿಸುವ ಆಧಾರದ ಮೇಲೆ.

ಇ) ಹೌದು.

ಈ) ಸುಮಾರು ಎರಡು ವರ್ಷಗಳು ಬೇಕಾಗುತ್ತದೆ.

ಬಿ.ಹೆಚ್. ಬನ್ನಿಕೊಡ್: ಹಿರೇಕೆರೂರಿನಲ್ಲಿ ಮುನ್ಸಿಫ್ ಮತ್ತು ಮ್ಯಜಿಸ್ಟ್ರೇಟ್ ನ್ಯಾಯಾಲಯದ ಕಟ್ಟಡವನ್ನು ಕಟ್ಟುತ್ತಿದ್ದು ಆ ಗುತ್ತಿಗೆದಾರ ಬಿಟ್ಟುಹೋಗಿರುವುದು ನಿಜವೆಂದು ಸರ್ಕಾರ ಒಪ್ಪಿಕೊಂಡಿದೆ ಆ ಕೆಲಸವನ್ನು ಪುನಃ ಪ್ರಾರಂಭಿಸುತ್ತೇವೆಂದು ಹೇಳಿದ್ದಾರೆ. ಇಲ್ಲಿ ಗಮನಿಸತಕ್ಕ ವಿಷಯ ಅಂದರೆ ಅಲ್ಲಿ ಕೆಲಸ ವಿಳಂಬ ಆಗಲಿಕ್ಕೆ ಮತ್ತು ಗುತ್ತಿಗೆದಾರ ಬಿಟ್ಟು ಹೋಗುವುದಕ್ಕೆ ಸರ್ಕಾರದಿಂದ ಹಣ ಕೊಡುವುದರಲ್ಲಿ ತಡವಾಗಿದ್ದರೆ ಬಿಟ್ಟು ಹೋಗಬಹುದು ಆದರೆ ಇಲ್ಲಿ ಯಾವುದೇ ಕಾರಣ ಇಲ್ಲದೆ ಬಜೆಟ್‌ನಲ್ಲಿ ಹಣ ಇದ್ದರೂ ಗುತ್ತಿಗೆದಾರ ಕೆಲಸ ಮಾಡುತ್ತಿದರೂ ಸಹ ಒಂದೂವರೆ ವರ್ಷದ ಕೆಲಸ ವಿಳಂಬವಾಗಲು ಯಾರು ಕಾರಣ? ಮೊದಲಿನ ಅಂದಾಜು ವೆಚ್ಚ ಎನಿತ್ತು? ಯಾವುದೇ ಸಕಾರಣ ಇಲ್ಲದೆ ವಿಳಂಬವಾದುದರಿಂದ ಈಗ ಹೆಚ್ಚಿಗೆ ತಗಲತಕ್ಕ ವೆಚ್ಚ ಎಷ್ಟಿತ್ತು? ಇದಕ್ಕೆ ಜವಾಬ್ದಾರರು ಯಾರು? ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಳ್ಳುತ್ತದೆ?

ಶ್ರೀ ಜಿ.ಹೆಚ್. ಅಶ್ವತ್ಥ ರೆಡ್ಡಿ: ಈ ಕಟ್ಟಡದ ಒಟ್ಟು ವೆಚ್ಚ ಸುಮಾರು 30 ಲಕ್ಷ ರೂಪಾಯಿಗಳು. 19 ಲಕ್ಷ ಚಿಲ್ಲರೆ ಈಗಾಗಲೇ ಖರ್ಚಾಗಿದೆ. ಏತಕ್ಕೆ ವಿಳಂಬವಾಗಿದೆ ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಆಗಿನ ಸಭಾಧ್ಯಕ್ಷರಾದ ಶ್ರೀ ಬಣಕಾರ್‌ರವರು ಈ ಪ್ಲಾನ್ ಸರಿಯಾಗಿಲ್ಲವೆಂದು ಬೇರೆ ತರಹ ಕಟ್ಟಡ ಕಟ್ಟಬೇಕೆಂದು ಪ್ರಯತ್ನ ಮಾಡಿದರು. ಆದರೆ ಅದಕ್ಕೆ ಇಲಾಖೆಯವರು ಒಪ್ಪಲಿಲ್ಲ ಆದರಿಂದ ತಡವಾಯಿತು. ಆಮೇಲೆ ಗುತ್ತಿಗೆದಾರರು ನನ್ನ ಕೈಯಲ್ಲಿ ಆಗುವುದಿಲ್ಲವೆಂದು ಬಿಟ್ಟುಹೋದ ಕಾರಣ ಕೆಲಸ ನಿಂತಿದೆ ಈಗ 30 ಲಕ್ಷ ರೂಪಾಯಿಗಳ ಬದಲು 60 ಲಕ್ಷ ರೂಪಾಯಿ ಖರ್ಚಾಗುತ್ತದೆ.

ಶ್ರೀ ಬಿ.ಎಸ್. ಬನ್ನಿಕೋಡ್: ಮಾನ್ಯ ಅಧ್ಯಕ್ಷರೇ ಹೈಕೋರ್ಟಿನವರು ಆ ಒಂದು ನೀಲಿನಕ್ಷೆ ತಯಾರು ಮಾಡಿ ಅಪ್ರೂವ್ ಮಾಡಿರುತ್ತಾರೆ. ಲೋಕೋಪಯೋಗಿ ಇಲಾಖೆಯವರೂ ಅದನ್ನು ಒಪ್ಪಿಕೊಂಡು ಕಾರ್ಯ ಪ್ರಾರಂಭವಾಗಿ ಸುಮಾರು 10 ಲಕ್ಷ ರೂಪಾಯಿ ಹಣ ಖರ್ಚು ಮಾಡಿದಮೇಲೆ ಆ ಕಟ್ಟಡದ ಮುಖ ಈ ಕಡೆ ಆಗಬೇಕು ಆ ಕಡೆ ಆಗಬೇಕು ಎಂಬ ಸಣ್ಣ ಕಾರಣಕ್ಕಾಗಿ ಆದೂ ಸಕಾರಣ ಅಲ್ಲ ಎಂದು ಹೇಳಿದರೂ ಸಹ ಒಂದೂವರೆ ವರ್ಷದಲ್ಲಿ ಮಾಡಿ ಸುಮಾರು 30 ಲಕ್ಷ ರೂಪಾಯಿ ಸಾರ್ವಜನಿಕರ ಹಣ ಹಾಳಾಗಿಹೋಯಿತು ಹೆಚ್ಚಿಗೆ ತೆರಬೇಕಾಯಿತು. ಕಟ್ಟಡ ಪೂರ್ತಿ ಆಗಲಿಲ್ಲ. ಆದ್ದರಿಂದ ಮಾನ್ಯ ಸಚಿವರು ಯಾವುದೇ ಸಾಮಾಜಿಕ ಕಾರ್ಯಕರ್ತರು ರಾಜಕಾರಣಿಗಳು ಸಕಾರಣ ಇಲ್ಲದೆ ಇಂಥ ಕಾರ್ಯಗಳನ್ನು ಎಸಗಿದರೆ ಸಮಾಜಕ್ಕೆ ರಾಜ್ಯದ ಹಣವನ್ನು ಹಾಳಾಗುವುದಕ್ಕೆ ಪೋಲಾಗುವುದಕ್ಕೆ ಆಸ್ಪದ ಕೊಟ್ಟರೆ ಸರ್ಕಾರದವರು ಏನಾದರೂ ಒಂದು ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ವಿಚಾರ ಮಾಡುತ್ತೀರಾ ಎಂದು ಕೇಳಬಯಸುತ್ತೇನೆ.

ಶ್ರೀ ಜಿ.ಎಸ್. ಅಶ್ವತ್ಥ ರೆಡ್ಡಿ: ಅಧ್ಯಕ್ಷರೇ ಅವರು ಬಹಳ ಜವಾಬ್ದಾರಿಯಿಂದ ಹೇಳಿರತಕ್ಕ ಕೆಲಸ ಅದು. ಆದರೆ ಸರ್ಕಾರ ಒಪ್ಪಿಲ್ಲ ಸರ್ಕಾರ ಅದನ್ನು ಕಂಪ್ಲೀಟ್ ಮಾಡಿಸುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್: ಎಷ್ಟು ದಿವಸದಲ್ಲಿ ಮುಗಿಸುತ್ತೀರಿ?

ಆದಷ್ಟು ಜಾಗ್ರತೆ ಮುಗಿಸುವುದಕ್ಕೆ ಎಷ್ಟು ದಿವಸ ತೆಗೆದುಕೊಳ್ಳುತ್ತೀರಿ?

ಶ್ರೀ ಜಿ.ಎಚ್. ಅಶ್ವತ್ಥರೆಡ್ಡಿ: ಇನ್ನು ಒಂದೂವರೆ ವರ್ಷದಲ್ಲಿ ಅದನ್ನು ಕಂಪ್ಲೀಟ್ ಮಾಡುತ್ತೇವೆ. ಸುಮಾರು 30 ಲಕ್ಷ ರೂಪಾಯಿ ಹೆಚ್ಚು ಖರ್ಚಾಗುತ್ತದೆ.

ಅಂತರಜಲ ಮಟ್ಟ ಇಳಿಮುಖವಾಗಿರುವ ತಾಲ್ಲೂಕುಗಳ ಸಂಖ್ಯೆ

2156 - ಶ್ರೀ ರಾಜುಗೌಡ (ಹನೂರು) : ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಹಾಗೂ ಎಷ್ಟು ತಾಲ್ಲೂಕುಗಳಲ್ಲಿ ಅಂತರ್ಜಲಮಟ್ಟ ಇಳಿಮುಖವಾಗಿದೆ.

ಆ) ಇದನ್ನು ಸರಿಯಾಗಿಸಲು ಸರ್ಕಾರ ಕೈಗೊಳ್ಳುವ ಕಾರ್ಯಕ್ರಮಗಳೇನು?

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು):

ಅ) ರಾಜ್ಯದ 17 ಜಿಲ್ಲೆಗಳ 117 ತಾಲ್ಲೂಕುಗಳಲ್ಲಿ ಅಂತರ್ಜಲವು ಇಳಿಮುಖವಾಗಿರುವುದು.

ಆ) ಅಂತರ್ಜಲ ಮರುಪೂರೈಕೆ ವಿಧಾನಗಳ ಬಗ್ಗೆ ಸಮೀಕ್ಷೆಯನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ಮಾಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶ್ರೀ ರಾಜುಗೌಡ: ಸ್ವಾಮಿ ಎಷ್ಟು ತಾಲ್ಲೂಕುಗಳಲ್ಲಿ ಮತ್ತು ಯಾವಯಾವ ಜಿಲ್ಲೆಯಲ್ಲಿ ಈ ಅಂತರಜಲ ಮಟ್ಟ ಕಡಿಮೆಯಾಗಿದೆ ಎಂಬುದನ್ನು ಹೇಳುತ್ತೀರಾ?

ಶ್ರೀ ಎಂ.ಎಲ್. ಉಸ್ತಾದ್: ಸನ್ಮಾನ್ಯ ಅಧ್ಯಕ್ಷರೆ 17 ಜಿಲ್ಲೆಗಳ ಪೈಕಿ ಒಟ್ಟು 117 ತಾಲ್ಲೂಕುಗಳಲ್ಲಿ ಗ್ರೌಂಡ್ ವಾಟರ್ ಇಳಿಮುಖವಾಗಿದ್ದು ಕಂಡುಬಂದಿದೆ ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಜಿ. ರಾಜುಗೌಡ: ಮಳೆ ನೀರು ಏನು ಹರಿಯುತ್ತದೆಯೋ ಆ ಮಳೆ ನೀರನ್ನು ಸಣ್ಣ ಸಣ್ಣ ಹಳ್ಳಕೊಳ್ಳ ಮತ್ತು ತೊರೆಗಳಲ್ಲಿ ತಡೆಗೋಡೆಗಳನ್ನು ನಿರ್ಮಿಸಿ ಆ ಮಳೆನೀರನ್ನು ಭೂಮಿಗೆ ಇಳಿಯುವಂತೆ ಮಾಡಿ ಅಂತರ್ಜಲ ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದು ಪ್ರಶ್ನೆ ಹಳ್ಳಕೊಳ್ಳಗಳು ಇಲ್ಲದಿದ್ದರೆ ಮಳೆ ನೀರು ಬಿದ್ದಾಗ ಆ ಮಳೆ ನೀರು ಪೋಲಾಗುತ್ತದೆ. ಅದನ್ನು ತಡೆಗಟ್ಟುವ ಸಲುವಾಗಿ ಪ್ರತಿಯೊಂದು ಹಳ್ಳಕೊಳ್ಳಗಳಲ್ಲಿ ತಡೆಗೋಡೆಗಳನ್ನು ನಿರ್ಮಿಸಿ ತನ್ಮೂಲಕ ನೀರನ್ನು ಕೆಳಗೆ ಇಳಿಸಿ ಜಲಸಂಗ್ರಹ ಜಾಸ್ತಿ ಮಾಡುವ ಬಗ್ಗೆ ತಾವು ಏನಾದರೂ ಯೋಚನೆ ಮಾಡಿದ್ದೀರಾ? ಅಂಥ ಕಾರ್ಯಕ್ರಮ ಏನಾದರೂ ಸರ್ಕಾರದಲ್ಲಿದೆಯೆ?

ಶ್ರೀ ಎಂ.ಎಲ್. ಉಸ್ತಾದ್ : ಈ ವರ್ಷ "Artifical recharge of ground water" ಎಂದು ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅದರ ಸಲುವಾಗಿ ಫಸ್ಟ್ ಟೈಂ ಎಕ್ಸ್‌ಪರಿಮೆಂಟ್ ಮಾಡುತ್ತಿದ್ದೇವೆ. ಇದಕ್ಕೆ 30 ಲಕ್ಷ ರೂಪಾಯಿ ಈ ವರ್ಷ ನಿಗದಿಪಡಿಸಲಾಗಿದೆ. 17 ಜಿಲ್ಲೆಗಳ 117 ತಾಲ್ಲೂಕಿನಲ್ಲಿ ಏನು ಇಳಿಮುಖವಾಗುತ್ತಿದೆ ಅಂತರ್ಜಲ ಮಟ್ಟ ಅದಕ್ಕೆ ಕಾರಣ ಬೋರ್‌ವೆಲ್‌ಗಳನ್ನು ಹೆಚ್ಚಾಗಿ ತೆಗೆದಿರುವುದು ಕಳೆದ ಎರಡು ದಶಕದಲ್ಲಿ ನಾಲ್ಕು ಪಟ್ಟು ಅಂತರ್ಜಲ ಕೆಳಗೆ ಹೋಗಲಿಕ್ಕೆ ಹತ್ತಿದೆ. ಈ ಸಲ 30ಲಕ್ಷ ರೂಪಾಯಿ ಇದರ ಸಲುವಾಗಿಯೇ ನಿಗದಿಪಡಿಸಲಾಗಿದೆ. ಅಂದರೆ ಒಂದು ಹನಿ ನೀರು ಸಹ ವೇಸ್ಟ್ ಆಗದಂತೆ ಮಾಡಬೇಕು ಎಂದು ಒಂದು ಎಕ್ಸ್‌ಪರಿಮೆಂಟ್ ಎಂದು ತೆಗೆದುಕೊಂಡಿದ್ದೇವೆ. ಅವರು ಹೇಳಿದಹಾಗೆ ಎಲ್ಲೆಲ್ಲಿ ನೀರು ಹೋಗುತ್ತದೆ ಆ ನೀರು ಹರಿದುಹೋಗದೇ